PAPERS LAID ON THE TABLE.

Sri K. PUTTASWAMY (Minister for Housing and Co-operation).—Sir, on behalf of Sri M. V. Krishnappa, I beg to lay on the Table of the House :

(1) Notification No. REV. SR/7458 dated 21st July 1966 (Suspension of Land Revenue for the Revenue year 1966-67 in respect of certain villages of Gadag Taluk, Dharwar District) ;
(2) Notification No. RDF 3 TRM 65 dated 8th August 1966 (Suspension and Remission of Land Revenue in certain villages in Gokak Taluk, Belgaum District);
(3) Notification No. RDF 29 TRM 65 (b) dated 26th October 1966 (Suspension and Remission of Land Revenue in certain villages of Badami Taluk, Bijapur District);

as required under sub-section (2) of section 194 of the Mysore Land Revenue Act, 1964.

Mr. SPEAKER.—The House will now adjourn for half an hour.

The House was adjourned for Recess at Ten of the Clock and re-assembled at Thirty Minutes past Ten of the Clock.

[MR. SPEAKER in the Chair]

RESOLUTION *Re* : THE CHANGE OF THE PRESENT NAME OF MYSORE STATE TO KARNATAKA

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಒಂದು ವಿಷಯ ಕೇಳಬೇಕೆಂದಿದ್ದೆ. ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. It is about the Moral Re-armament Organisation in India. Whether any financial aid is given to that organisation ?

Mr. SPEAKER.—I will try to get the file now.

†ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ನಾನು ಮೊನ್ನೆ ಪ್ರಾರಂಭವಾಗಬೇಕಾಗಿದ್ದಂಥ ಮಾತನ್ನು ಇನ್ನೊಂದು ಸ್ವಲ್ಪ ಕಾಲ ಮಾತನಾಡಿ ಮುಕ್ತಾಯಗೊಳಿಸುತ್ತೇನೆ. ಸ್ವಾಮಿ, ನಾನು ಹೆಚ್ಚಿಗೆ ನನ್ನ ಭಾಷಣವನ್ನು ಬೆಳೆಸದೆ ಕೆಲವು ಉದಾಹರಣೆಗಳನ್ನು ಮಾತ್ರ ಹೇಳಿ ಇವತ್ತು ಮಾತನಾಡಬೇಕೆಂದಿದ್ದೇನೆ. ತತ್ಪೂರ್ವದಲ್ಲಿ ಈ ನಿರ್ಣಯ ಹಲವು ಸಲ ಈ ಸಭೆಯಲ್ಲಿ ಬಂದಿದೆ. ಯಾವ ಯಾವ ವೇಳೆಯಲ್ಲಿ ಬಂದಿದೆ, ಎಷ್ಟು ಸಲ ಚರ್ಚೆಯಾಯಿತು, ಏಷ್ಟು ಜನ ಭಾಗವಹಿಸಿದ್ದಾರೆ ಎನ್ನುವುದನ್ನು ನಾನು ಹೇಳುತ್ತೇನೆ. ಈ ನಿರ್ಣಯವನ್ನು 30-9-1957ರೊಳಗೆ ನಾನು ಮಂಡಿಸಿದ್ದೆ. ಆ ಕಾಲಕ್ಕೆ 21 ಮಂದಿ ಸದಸ್ಯರು ಈ ನಿರ್ಣಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಿದ್ದರು. ಪುನಃ 22-4-1959ರಲ್ಲಿ ವಿರೋಧಪಕ್ಷದ ಉಪನಾಯಕರಾದ ಶ್ರೀ ಎಂ. ರಾಮಪ್ಪನವರು ಈ ನಿರ್ಣಯವನ್ನು ಮಂಡಿಸಿದರು. ಆ ನಿರ್ಣಯದ ಮೇಲೆ 30 ಜನ ಸದಸ್ಯರು ಭಾಷಣ ಮಾಡಿದ್ದಾರೆ. ಆ ನಂತರ 25-4-1961ರಲ್ಲಿ ಶ್ರೀ ಬನವನಗೌಡರು ಈ ನಿರ್ಣಯವನ್ನು ಮಂಡಿಸಿದರು. ಚರ್ಚೆಯಲ್ಲಿ 24 ಜನ ಸದಸ್ಯರು ಭಾಗವಹಿಸಿದ್ದರು. 2-8-1962ರಲ್ಲಿ ಶ್ರೀ ಆರ್. ಎಸ್. ಪಾಟೀಲ್ ಅವರು ನಿರ್ಣಯವನ್ನು ಮಂಡಿಸಿದ್ದರು. ಅದು ಎರಡು ದಿವಸ ಪೂರ್ತಿ ಚರ್ಚೆಯಾಯಿತು. 38 ಜನ ಸದಸ್ಯರು

ಮಾತನಾಡಿದ್ದಾರೆ. ಇಷ್ಟೆಲ್ಲಾ ನಿರ್ಣಯಗಳು, ಕೆಲವು ಸಾರಿ ಎರಡು ದಿನದವರೆಗೂ ಚರ್ಚೆಯಾಗಿದೆ. ಕೆಲವರು ಪರವಾಗಿ ಮಾತನಾಡಿದ್ದಾರೆ. ಕೆಲವರು ವಿರೋಧವಾಗಿ ಮಾತನಾಡಿದ್ದಾರೆ. ಬಹಳಷ್ಟು ಜನ ಮಾತನಾಡಿದ್ದಾರೆ. ಸಾಕಷ್ಟು ಚರ್ಚೆಯಾಗಿದೆ. ಇದು ಒಂದು ಹೊಸ ವಿಷಯ ಎನ್ನುವ ತಿಳುವಳಿಕೆ ಬರಬಾರದು. ಈ ವಿಷಯು 10 ವರ್ಷದಿಂದ ಒಂದೇ ನಮನೆ ನಡೆದುದಾಗಿದೆ. ಮುಖ್ಯವಾಗಿ ಹೇಳುವುದಾದರೆ 30-7-1957ರಲ್ಲಿ ನಾನು ಈ ವಿಷಯದ ಬಗ್ಗೆ ತೆರೆದ ಮನಸ್ಸಿನಿಂದ, ಬಿಚ್ಚು ಮನಸ್ಸಿನಿಂದ ಮಾತನಾಡಿದ್ದೇನೆ. ಅದನ್ನು ತಾವುಗಳು ಲಕ್ಷ್ಯ ಕೊಟ್ಟು ಓದಿದರೆ, ಯಾರೂ ವಿರೋಧ ಮಾಡಲು ಸಾಧ್ಯವಿಲ್ಲ. ಮೊದಲನೆಯು ವಿಚಾರವೆಂದರೆ, ಇದನ್ನು ರಾಜಕೀಯ ಪಕ್ಷದ ದೃಷ್ಟಿಯಿಂದ ಮಾತನಾಡಬಾರದು. ಕರ್ನಾಟಕ ಪ್ರಶ್ನೆ ರಾಜಕೀಯ ಪ್ರಶ್ನೆ ಅಲ್ಲವೇ ಅಲ್ಲ. ಕರ್ನಾಟಕ ಪ್ರಶ್ನೆ ಸಾಂಸ್ಕೃತಿಕವೂ ಹೌದು, ಆಧ್ಯಾತ್ಮಿಕವೂ ಹೌದು. ಭೌತಿಕವು ಆಧ್ಯಾತ್ಮಿಕದ ದಾಸ್ಯವೇ ಹೊರತು, ಆಧ್ಯಾತ್ಮಿಕವು ಭೌತಿಕದ ದಾಸ್ಯವಲ್ಲ. ನಮ್ಮ ದೇಶದಲ್ಲಿ ಏನಾಗಿದೆಯೆಂದರೆ, ಭೌತಿಕವು ಆಧ್ಯಾತ್ಮಿಕವನ್ನು ತನ್ನ ದಾಸನನ್ನಾಗಿ ಮಾಡಿಕೊಳ್ಳಲಿಕ್ಕೆ ಅಪೇಕ್ಷೆ ಮಾಡುತ್ತಿದೆ. ಈ ಪಕ್ಷಪಾತವನ್ನು ಸರ್ಕಾರ ನಂದರ್ಭಾನುಸಾರ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಒಟ್ಟಿನಲ್ಲಿ ನಾನ ಹೇಳುವುದೇನೆಂದರೆ, ಎಲ್ಲಾ ಪಕ್ಷದ ಸದಸ್ಯರಿಗೂ, ರಾಜಕೀಯ ದೃಷ್ಟಿಯಿಂದ ಈ ಪ್ರಶ್ನೆ ವಿಚಾರ ಮಾಡಬೇಡಿ. ಇದು ರಾಜಕೀಯ ಪ್ರಶ್ನೆ ಅಲ್ಲವೇ ಅಲ್ಲ. ಇದು ಸಾಂಸ್ಕೃತಿಕ, ಆಧ್ಯಾತ್ಮಿಕ ಪ್ರಶ್ನೆಯೆಂಬುದನ್ನು ತೋರಿಸಲು, ಪ್ರತ್ಯೇಕವಾಗಿ ಚರ್ಚಾಕೂಟವನ್ನು ಏರ್ಪಡಿಸಿದರೆ ನಾಲ್ಕು ಘಂಟೆ ಬೇಕಾದರೆ ಮಾತನಾಡುವವನಿದ್ದೇನೆ. ಆ. ನ. ಕೃಷ್ಣರಾಯರಂತಹ ಅನೇಕ ಅನೇಕ ಕವಿಗಳು ಈ ಪ್ರಶ್ನೆಯನ್ನು ವಿಚಾರ ಮಾಡಿರಬೇಕು. ಕವಿ, ರವಿ ದೃಷ್ಟಿಯಿಂದ ಈ ಪ್ರಶ್ನೆ ವಿಚಾರ ಮಾಡಬೇಕು. ಆ ಒಂದು ದೃಷ್ಟಿಯಿಂದ ಈ ಪ್ರಶ್ನೆಯ ಬಗ್ಗೆ ಸ್ವಲ್ಪದರಲ್ಲಿಯೇ ಇಲ್ಲ ತಮಗೆ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಈ ಪ್ರಶ್ನೆಯನ್ನು ಕೈಬಿಟ್ಟಿಲ್ಲವೆಂದು ಮಾನ್ಯ ಅರ್ಥ ಸಚಿವರು ಮಾತನಾಡುವಾಗ ಹೇಳಿದರು. ಕೈಬಿಡಲಿಕ್ಕೆ ಯಾರ ಕೈಲೂ ಇಲ್ಲ. ಹಿಡಿಯಲಿಕ್ಕೆ ಯಾರ ಕೈಲೂ ಇಲ್ಲ. ಇದು ನಭೆಗೆ ನಂಬಂಧಪಟ್ಟ ವಿಷಯವೆಂದು ನದುದ್ದೇಶದಿಂದ ಅವರು ಹೇಳಿದರು. ಕೇವಲ ಬಹುಮತದಿಂದ ನಿರ್ಣಯಿಸಬೇಕಾದಂತಹ ವಿಷಯವಲ್ಲ. ಒಮ್ಮತದಿಂದ ವಿಚಾರ ಮಾಡಬೇಕೆಂದು ಅವರು ಹೇಳಿದರು. ಆಮೇಲೆ ಅವರನ್ನು ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಪಾರ್ಲಿಮೆಂಟರಿ ಪದ್ಧತಿ ಇಂಗ್ಲೆಂಡ್ ಮತ್ತು ಅಮೇರಿಕಾದಲ್ಲಿ 300 ವರ್ಷದಿಂದ ಇದೆ. ಹಿಂದೂಸ್ಥಾನದಲ್ಲಿ 20 ವರ್ಷದಿಂದ ಇದೆ. ತರುವಾಯ ನಮಸ್ಯೆಯನ್ನು ಒಮ್ಮತದಿಂದ ತೀರ್ಮಾನಮಾಡಬೇಕು. ಇಂತಹ ನಮಸ್ಯೆಗಳು ಬಹು ಕಷ್ಟ. ಒಮ್ಮತ ಶಕ್ಯವಿದ್ದಷ್ಟು ಬರಬೇಕು. ಆ ಪ್ರಯತ್ನ ಸರ್ಕಾರದ್ದು ಇದೆಯೆಂದು ಹೇಳುತ್ತಾರೆ. ಎಷ್ಟೋ ಜನಗಳಿಂದ ಅಭಿಮಾನ ಪಡೆಯುವಾಗ ಕೆಲವು ನಂದರ್ಭಗಳಲ್ಲಿ ತೆಗಳಿಸಿಕೊಂಡು, ಬೊಗಳಿಸಿಕೊಂಡು ಹೋಗಬೇಕಾಗುತ್ತದೆ. ಶ್ರೀಮಾನ್ ಗೋಪಾಲಗೌಡರು ಒಂದು ಮಾತನ್ನು ಹೇಳಿದರು. ನಾನು ಉಪವಾನ ಕುಳಿತು ನತ್ತಾದರೂ ಇದನ್ನು ಪಡೆಯಬೇಕಾದೀತೆಂದು. ನಾನು ಕೊನೆಗೆ ಅವರ ಮಾತನ್ನೇ ಹೇಳಬೇಕಾಗಬಹುದು. ಶ್ರೀ ಮುಕ್ಕಣ್ಣಪ್ಪನವರ ಮಾತನ್ನು ನಾನು ಕೇಳದೆ ಹೋದರೂ ಶ್ರೀ ಗೋಪಾಲಗೌಡರ ಮಾತನ್ನು ಕೇಳಬೇಕಾಗಿ ಬರುತ್ತದೆ.

ಆಮೇಲೆ ಇವತ್ತು ಈ ನಿರ್ಣಯದ ಹಿನ್ನೆಲೆಯನ್ನು ಹೇಳುತ್ತೇನೆ. ಕೆಲವು ಘಟನೆಗಳನ್ನು ಈ ನಂದರ್ಭದಲ್ಲಿ ಹೇಳಬೇಕಾಗಿದೆ. ಇದಕ್ಕೆ ವಿರೋಧ ಎಲ್ಲದೆಯೆಂದರೆ, ಬಹಳ ಕೊಂಚ ಜನರೊಳಗೆ ಅಂದರೆ ನಮ್ಮ ಹಳೆಯ ಮೈಸೂರಿನ ಸ್ನೇಹಿತರಲ್ಲಿದೆ. ಆ ಸ್ನೇಹಿತರಲ್ಲಿ ಕೆಲವರು ಮಾತ್ರ ಆ ರೀತಿ ಇದ್ದಾರೆ. ಎಲ್ಲರೂ ಅದಕ್ಕೆ ವಿರೋಧಮಾಡುತ್ತಾರೆಂದು ಹೇಳಿದರೆ ದೇವರೂ ಕೂಡ ಮೆಚ್ಚುವುದಿಲ್ಲ. ಅವರಿಗೆ ಇದರಲ್ಲಿ ಏನೋ ಒಂದು ಹಠ, ಇದನ್ನು ಬರಗೊಡಬಾರದೆಂಬ ಹಠ ಇದೆ. ಇದು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕವಾದ ವಿಷಯ. ರಾಜಕಾರಣಕ್ಕೆ ನಂಬಂಧಪಟ್ಟ ವಿಷಯವೇನೂ ಅಲ್ಲ. ಇದು ಹೇಗೆ ಎಂದು ನೋಡಬೇಕಾದರೆ 1957, 1959, 1961, 1962, ಮತ್ತು 1963ನೇ ಸಾಲುಗಳಲ್ಲಿ ಇಲ್ಲಿ ನಡೆದಂಥ ಚರ್ಚೆಗಳಲ್ಲಿ ಹೇಗೆ ಆಧ್ಯಾತ್ಮಿಕ ವಿಷಯವಿದೆ, ಕರ್ನಾಟಕವೆಂಬ ಹೆಸರು ಇದಕ್ಕೆ ಯಾವ ಯಾವ ರೀತಿ ಇತ್ತೆಂಬುದನ್ನು ಹೇಳಿದ್ದೇನೆ. ಅದನ್ನು ನನಗೆ ಇಲ್ಲ ರಿಪೀಟ್ ಮಾಡುವುದಕ್ಕೆ ಇಚ್ಛೆ ಇಲ್ಲ. ಕೆಲವು ಮಾತುಗಳನ್ನು ಹೇಳುತ್ತೇನೆ. ಅದರ ಮೂಲತತ್ವ ಏನಿದೆ ಎಂಬುದನ್ನು ಹೇಳುತ್ತೇನೆ. ಇದು ಬರೀ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು ಕರ್ನಾಟಕ ಪ್ರಶ್ನೆಯೇ ಅಲ್ಲ. ಕರ್ನಾಟಕ ಅಥವಾ ಕರ್ನಾಟಕ ಏಕೀಕರಣವೆಂಬ ಹೆಸರು ನಿಜವಾಗಿ ಆದುದು ಹಳೆಯ ಮೈಸೂರಿನಲ್ಲಿ ಮಹಾರಾಜರ ಆರಮನೆ ಇರುವ ಕಡೆಯಲ್ಲ. ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ 60 ವರ್ಷಗಳ ಕೆಳಗೇ ಕರ್ನಾಟಕ ಪರಿಷತ್ತು ಎಂದು ಆಗಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜಮಹಾರಾಜರುಗಳು ಎಂದೋ ಹೊರಟುಹೋದರು, ಅವರನ್ನು ಕಿತ್ತುಹಾಕಿ ಇವರು ಚಕ್ರವರ್ತಿಗಳಾದರು.

ಶ್ರೀ ಎ. ಜೆ. ದೊಡ್ಡಮೇಟಿ.—ಇನ್ನು ಅಲ್ಲಿ ಇರತಕ್ಕ ಶೃಂಗೇರಿ ಹಳೆಯ ಮೈಸೂರಿನ ಒಂದು ಭಾಗ. ನಾನು ಬಹಳ ಪೂಜ್ಯಭಾವನೆಯಿಂದ ನೋಡಿ ಹೇಳುವುದಾದರೆ, ಇಡೀ ಭಾರತ ದೇಶದಲ್ಲಿಯೇ ಕವಿಗಳಲ್ಲಿ ಶ್ರೇಷ್ಠರೆನಿಸಿಕೊಂಡಿದ್ದಂಥ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಕರ್ಣಾಟಕ ಧರ್ಮ ರತ್ನಾಕರರೆಂಬ ಬಿರುದು ಇತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಶೈಲದಲ್ಲಿ ಶಂಕರಾಚಾರ್ಯರ ಚಕ್ರವಿದೆ. ಇಲ್ಲಿನ ಶೃಂಗೇರಿ ಮಠ ಸ್ಥಾಪನೆಯಾಗುವುದಕ್ಕೆ ಆ ಚಕ್ರವೇ ಕಾರಣ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ನಿಶ್ಚಯವಾಗಿ ಶ್ರೀ ಚಕ್ರವನ್ನು ಪೂರ್ತಿಯಾಗಿ ಅಭ್ಯಾಸ ಮಾಡಿದ್ದೇನೆ. ಮೂರು ವರ್ಷಗಳ ತನಕ ಬೇಕಾದರೆ ಅದನ್ನು ಅಭ್ಯಾಸಮಾಡುತ್ತೇನೆ. ಶೃಂಗೇರಿ ಜಗದ್ಗುರುಗಳ ಪ್ರಶ್ನೆ ಬೇರೆ ಇಲ್ಲ ಹೇಳುವುದಾದರೆ...ಶಂಕರಾಚಾರ್ಯರ ಪೀಠ ಇದರ ಮಹತ್ವವನ್ನೂ ಸಹ ಇಲ್ಲ ಹೇಳಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶೃಂಗೇರಿ ವಿಜಯನಗರ ಸಮ್ರಾಜ್ಯದ ಒಂದು ಭಾಗವಾಗಿತ್ತು.

ಶ್ರೀ ಎ. ಜೆ. ದೊಡ್ಡಮೇಟಿ.—ವಿಜಯನಗರ ಸಾಮ್ರಾಜ್ಯಸ್ಥಾಪಿಸಿದ ಹಕ್ಕರಾಯ ಮತ್ತು ಬುಕ್ಕರಾಯ ಇವರಿಗೆ ಕರ್ಣಾಟಕ ಸಿಂಹಾಸನಾಧೀಶ್ವರರು ಎಂಬ ಬಿರುದು ಇತ್ತು. ಆ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದ್ದು ವಿದ್ಯಾರಣ್ಯರು.

ಶ್ರೀ ಎಚ್. ಆರ್. ಕೇಶವಮೂರ್ತಿ (ಗೌಡಸಿ).—ಶೃಂಗೇರಿ ಜಗದ್ಗುರುಗಳು ಈಗ ದೆಹಲಿಯಲ್ಲಿ ಇದ್ದಾರೆ. ಅವರಿಂದ ತಿಳಿದುಕೊಳ್ಳಿ.

ಶ್ರೀ ಎ. ಜೆ. ದೊಡ್ಡಮೇಟಿ.—ಇನ್ನೊಂದು ಮುಖ್ಯ ವಿಷಯವನ್ನು ನಾನು ಹೇಳುತ್ತೇನೆ. ಕನ್ನಡನಾಡಿನ ಎಲ್ಲಾ ಜನರೂ ಪತ್ರಿಕೆಗಳನ್ನು ಓದಿತ್ತಿದ್ದೇವೆ. ನಾವೂ ಓದುತ್ತಿದ್ದೇವೆ. ಕೆಲವು ಕಾಲದ ಹಿಂದೆ ಮೈಸೂರು ರಾಜ್ಯ ಪತ್ರಕರ್ತರ ಸಂಘವೆಂದು ಇದ್ದುದು ಎಲ್ಲಾ ಪತ್ರಿಕೆಗಳ ಸಂಪಾದಕಾ ಮಂಡಲಿ ಮತ್ತು ಚಾಲಕಮಂಡಲಿ ಸೇರಿ ಕರ್ಣಾಟಕ ರಾಜ್ಯ ಪತ್ರಿಕೋದ್ಯೋಗಿಗಳ ಸಂಘವೆಂದು ಈಚೆಗೆ ಬದಲಾಯಿಸಿಕೊಂಡಿದ್ದು ನಾವು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ಅದಕ್ಕೆನು ಕಾರಣ ವೆಂದರೆ, ಅದರಲ್ಲಿ ಏನೋ ಒಂದು ರೀತಿಯ ಶಕ್ತಿ ಇದೆ, ಸಾಮರ್ಥ್ಯವಿದೆ, ಅದು ಒಂದು ಮಂತ್ರಕಣ ವೆಂದು ಶ್ರೀ ಕೆ. ವಿ. ಪುಟ್ಟಪ್ಪನವರ ವಾಣಿ ಇದೆ. ಹೀಗೆ ಇನ್ನೂ ಅನೇಕ ಕಾರಣಗಳಿವೆ. ಈಗ ಕರ್ಣಾಟಕ ಪಿ. ಎಸ್. ಪಿ. ಪಾರ್ಟಿ, ಕರ್ಣಾಟಕ ಸ್ವತಂತ್ರ ಪಾರ್ಟಿ, ಅದರಲ್ಲಿ ಶ್ರೀ ಚನ್ನಬೈರೇಗೌಡರು ಇಂತಹವರೆಲ್ಲಾ ಇದ್ದಾರೆ.

ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).— ಕರ್ಣಾಟಕ ಎಂದು ಹೆಸರಿಟ್ಟು ನೀವು ಕಾಂಗ್ರೆಸ್ಸಿನಲ್ಲಿ ಏಕೆ ಇದ್ದೀರಿ?

ಶ್ರೀ ಎ. ಜೆ. ದೊಡ್ಡಮೇಟಿ.—ಕಾಂಗ್ರೆಸ್ ಒಂದು ಪಕ್ಷ ಬಿಟ್ಟರೂ ದೇಶದ ಎಲ್ಲಾ ಪಕ್ಷಗಳಿಂದ ಕಾಂಗ್ರೆಸ್ಸಿನಲ್ಲಿ ಕರ್ಣಾಟಕ ಕಾಂಗ್ರೆಸ್ ಎಂದು ಸ್ವಾತಂತ್ರ್ಯ ಪೂರ್ವದಲ್ಲಿತ್ತು. ಸ್ವಾತಂತ್ರ್ಯ ಪೂರ್ವ ದಲ್ಲಿ ಹಳೆಯ ಮೈಸೂರನ್ನೊಳಗೊಂಡು ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಂದೂ ಸಹ ಇತ್ತು. ಅದನ್ನು ಬೇಕಾದರೆ ನಾನು ಸಾಕ್ಷ್ಯ ಸಾಹಿತ್ಯಗಳಿಂದ ತೋರಿಸಿಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1951ರೊಳಗೆ ನಾನೂ ಒಬ್ಬ ಕಾಂಗ್ರೆಸ್ ಸದಸ್ಯನೇ! ಮೈಸೂರು ಕರ್ಣಾಟಕ ಪ್ರದೇಶವೆಂದೇನೂ ಇರಲಿಲ್ಲ. ಕೆ. ಪಿ. ಸಿ. ಸಿ. ಎಂದು ಇತ್ತು.

Mr. SPEAKER.—Order, order. This is the fag end of our sittings. Why not allow the member to say whatever he wants! He is not allowed to express himself. I don't think that kind of a treatment is fair. I may allow a certain latitude. But, more frequent disturbance is not proper. Can't we have that much of patience in ourselves! The Hon'ble member will continue uninterrupted.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಕರ್ಣಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಬೆಂಗಳೂರಿನಲ್ಲಿತ್ತು. ತುಮಕೂರಿನ ಕಡೆಯೂ ಇತ್ತು. ದಾವಣಗೆರೆಯಲ್ಲಿಯೂ ಇತ್ತು. ನಾನು ಪ್ರತಿನಿಧಿಯಾಗಿ ಇಲ್ಲ ಹೇಳುತ್ತೇನೆ. ಮೈಸೂರು ಕರ್ಣಾಟಕ ಕಾಂಗ್ರೆಸ್ ಕಮಿಟಿ ಎಂದು ಬೇರೆ ಇತ್ತು. ಆಂತರಿಕವಾದ ಆಡಳಿತವನ್ನು ನಡೆಸುವುದಕ್ಕಾಗಿ ಮೈಸೂರು ಕಾಂಗ್ರೆಸ್ ಎಂಬುದಾಗಿ ಒಂದಿತ್ತು. ಆಮೇಲೆ ಸ್ವರಾಜ್ಯ ದೊರೆತನಂತರವೂ 1948ರಲ್ಲಿ ಕರ್ಣಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಎಂದು ಇತ್ತು. ಶ್ರೀಮಾನ್ ಟಿ. ಸಿದ್ದಲಿಂಗಯ್ಯನವರು ಆಗ ಅಧ್ಯಕ್ಷರಾಗಿದ್ದರು. ಇದೇ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಎಂದಿದ್ದುದು ಸ್ವತಂತ್ರ ಮೈಸೂರು ಕಾಂಗ್ರೆಸ್ ಆಯಿತು. ಇದಾದಮೇಲೆ ಎರಡು ಸಮಿತಿ

ಗಳು ಒಕ್ಕೂಟವಾಗಿ ಪುನಃ ಕರ್ನಾಟಕ ಪ್ರದೇಶ ಎನ್ನುವುದಕ್ಕೆ ಬದಲಾಗಿ ಮೈಸೂರು ಕಾಂಗ್ರೆಸ್ ಎಂದು ಬಂತು. ಅದೇ ರೀತಿ ಆಗಿದೆಯೆಂದು ಹೇಳುವವರು ಈಗ ಎಷ್ಟೋ ಮಂದಿ ಇದ್ದಾರೆ. ಶ್ರೀ ಜಿ. ಎ. ಗೌಡ ಅವರು 1957ನೇ ಇಸವಿಯಲ್ಲಿ ತಮ್ಮ ಭಾಷಣದಲ್ಲಿ ಸಮರ್ಥನೆಮಾಡುತ್ತಾ ಇದೇ ಮಾತನ್ನು ಹೇಳಿದ್ದಾರೆ.

ಶ್ರೀಮಾನ್ ಜಿ. ಎ. ಗೌಡರು, ಮತ್ತು ಆಗಿನ ವಿರೋಧಪಕ್ಷದ ನಾಯಕರು ಹಾಗೂ ಶ್ರೀಮಾನ್ ರಾಚಯ್ಯನವರೂ ಕೂಡ ಈ ವಿಷಯದಲ್ಲಿ ತಮ್ಮ ಸಮರ್ಥನೆಯನ್ನು ಮಾಡಿದ್ದಾರೆ. ಇದು ನಮ್ಮ ದುರ್ದೈವ, ದೇಶದಲ್ಲಿ ಕೆಲವರ ತಪ್ಪು ತಿಳುವಳಿಕೆ ಹಾಗೂ ಕೆಲವು ರಾಜಕೀಯ ಕಾರಣಗಳಿಂದ ಈ ಪ್ರಶ್ನೆ ಹಾಗೆಯೇ ಉಳಿದಿದೆ. 1963ನೇ ಇಸವಿಯಲ್ಲಿ ಈ ನಿರ್ಣಯದ ಮೇಲೆ ಸಾಕಷ್ಟು ಚರ್ಚೆ ನಡೆದು ಅದಕ್ಕೆ ಕೊನೆ ಘಳಿಗೆ ಬಂದು ಇನ್ನು ಕೇವಲ 5 ನಿಮಿಷಗಳಲ್ಲಿ ಈ ನಿರ್ಣಯಕ್ಕೆ ವೋಟಿಂಗ್ ಆಗಬೇಕಾಗಿತ್ತು. ಆಗ ಈ ನಿರ್ಣಯದ ಬಗ್ಗೆ ವೋಟಿಂಗ್ ಆಗಿದ್ದರೆ ನಿಶ್ಚಯವಾಗಿ ಇದು ಬಹುಮತದಿಂದ ತೀರ್ಮಾನವಾಗುತ್ತಿತ್ತು. ಆದರೆ ವಿರೋಧಪಕ್ಷದ ನಮ್ಮ ಸ್ನೇಹಿತರು ಕೆಲವರು...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಆಗ ಏತಕ್ಕೆ ಮಾಡಲಿಲ್ಲ?

ಶ್ರೀ ಎ. ಜೆ. ದೊಡ್ಡಮೇಟಿ.—ತಪ್ಪು ನನ್ನದು. ಹಿತದೃಷ್ಟಿಯಿಂದ ಯಾವುದನ್ನು ನಾವು ನೀವು ಮಾಡುವುದಕ್ಕಾಗುವುದಿಲ್ಲ ಅದನ್ನು ಬಿಡುವುದು ಅವಶ್ಯ. ಇವೊತ್ತು ಇದನ್ನು ಯಾವ ರಾಜಕೀಯ ದೃಷ್ಟಿಯಿಂದಲೂ ನೋಡದೆ ಇದು ಒಮ್ಮತದಿಂದ ತೀರ್ಮಾನವಾಗುವಂತೆ ಮಾಡಬೇಕು. ನಾನು ಅದನ್ನು ಒಪ್ಪುತ್ತೇನೆ. ಆರೀತಿ ವಿಚಾರ ಮಾಡುವಾಗ ಅನೇಕ ಸ್ನೇಹಿತರು ಅಧಿಕಾರದಲ್ಲಿ ಇದ್ದವರು, ಕುರ್ಚಿಯಲ್ಲಿ ಕುಳಿತುಕೊಂಡಿರುವವರು ಕುಳಿತು ಮಾತನಾಡಿ ಈ ವಿಷಯದಲ್ಲಿ ಒಂದು ಒಮ್ಮತಕ್ಕೆ ಬರಬೇಕು. ಇದರಲ್ಲಿ ತೊಂದರೆ ಏನು ಕಷ್ಟ ಏನು, ಅಥವಾ ಬೇರೆ ಇನ್ನು ಯಾವುದಾದರೂ ಇದ್ದರೆ ಎಲ್ಲವನ್ನೂ ಪರಿಹಾರ ಮಾಡುವುದು ಅವರ ಕರ್ತವ್ಯ. ಈ ಕರ್ನಾಟಕ ರಾಜ್ಯದ ಸೃಷ್ಟಿಯು ಒಬ್ಬರು ಮುಖ್ಯಮಂತ್ರಿಗಳಿಗಾಗಿ, ಮಂತ್ರಿಗಳಿಗಾಗಿ ಆಗಿದೆ ಎಂದು ತಿಳಿದಿದ್ದರೆ ಅದು ತಪ್ಪು. ಈ ಪ್ರಶ್ನೆಗೆ ತೀವ್ರವಾಗಿ ಗಮನ ಕೊಡಬೇಕು. ಇದನ್ನು ರಾಜಕೀಯ ದೃಷ್ಟಿಯಿಂದ ನೋಡಬಾರದು. ನಾಡಿನ ಕಣ್ಣುಗಳಾದ ಪತ್ರಿಕೋದ್ಯೋಗಿಗಳು ಇತ್ತೀಚೆಗೆ ತಮ್ಮ ಸಂಘದ ಹೆಸರನ್ನು ಕರ್ನಾಟಕರಾಜ್ಯ ಕಾರ್ಯನಿರತ ಪತ್ರಿಕೋದ್ಯೋಗಿ ಸಂಘವೆಂದು ಬದಲಾಯಿಸಿಕೊಂಡಿದ್ದಾರೆ. ಅದರಲ್ಲಿ ವಿರೋಧ ಪಕ್ಷಗಳವರ ಪತ್ರಿಕೆಗಳು ಇವೆ, ಕಾಂಗ್ರೆಸ್ ಪಕ್ಷದವರ ಪತ್ರಿಕೆಗಳೂ ಇವೆ. ಇವೊತ್ತು ಹಳೆಯ ಮೈಸೂರಿನ ಬಹು ಜನಗಳು ಹೊಂದಿಕೊಂಡು ಈ ಮಾತನ್ನು ವಿಚಾರ ಮಾಡಬೇಕು. ಹಳೆಯ ಮೈಸೂರು ಹುಟ್ಟಿಸಿದ ಕರ್ನಾಟಕವೆಂಬ ಈ ಶಿಶುವಿನ ಕತ್ತುಹಿಸಕಬೇಡಿ ಅದನ್ನು ಎತ್ತಿಮುದ್ದಾಡಿ. ಇದನ್ನು ಯಾವರೀತಿ ವಿಚಾರಮಾಡಬೇಕೋ ಆರೀತಿ ವಿಚಾರ ಮಾಡಬೇಕು. ಇಡೀ ಭಾರತದೇಶದಲ್ಲೆಲ್ಲಾ ಕನ್ನಡದೇಶದಲ್ಲಿ ಹುಟ್ಟಿದಂತಹ ಕರ್ನಾಟಕ ಸಂಗೀತ ಎಂದು ಇದೆ. ಮದ್ರಾಸಿನಲ್ಲಿ ಕರ್ನಾಟಕ ಸಂಗೀತ ಎಂದು ಹೇಳುತ್ತಾರೆ. ಮೊನ್ನೆ ಅಮೇರಿಕಾದೇಶದವರು ಇಲ್ಲಿಗೆ ಬಂದಿದ್ದಾಗ ಕರ್ನಾಟಕ ಸಂಗೀತ ಕಛೇರಿಯನ್ನು ನಡೆಸಿದರು. 5 ಸಾವಿರ ಮೈಲಗಳಿಂದ ಇಲ್ಲಿಗೆ ಬಂದಿದ್ದವರು ಕನ್ನಡದಲ್ಲಿ ಕರ್ನಾಟಕ ಸಂಗೀತವನ್ನು ಹೇಳಿದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—Point of order. Sir, ಅಧ್ಯಕ್ಷರೇ ಈ ನಿರ್ಣಯದ ಮೇಲೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡಿ ಇದನ್ನು ವೋಟಿಗೆ ಹಾಕಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, 1957ನೇ ಇಸವಿಯಿಂದ ಇಲ್ಲಿಯವರೆಗೆ ಈ ನಿರ್ಣಯದ ಮೇಲೆ ಸುಮಾರು 110 ಜನಗಳು ಮಾತನಾಡಿದ್ದಾರೆ. ಇದರಲ್ಲಿ ಕೇವಲ 23 ಜನಗಳು ಮಾತ್ರ ಈ ನಿರ್ಣಯವನ್ನು ವಿರೋಧ ಮಾಡಿದ್ದಾರೆ. ಬಾಕಿಯವರೆಲ್ಲರೂ ಪರವಾಗಿ ಮಾತನಾಡಿದ್ದಾರೆ. ಮೊನ್ನೆ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಅಮೇರಿಕಾದಲ್ಲಿ ಕರ್ನಾಟಕ ಸಂಗೀತವನ್ನು ಹಾಡಿದ್ದಾರೆ. ಇವೊತ್ತು ಅಂತರ ರಾಷ್ಟ್ರಗಳಲ್ಲಿ ಕೂಡ ಕರ್ನಾಟಕದ ಹೆಸರು ಜಯಭೇರಿಯನ್ನು ಹೊಡೆಯುತ್ತಿದೆ. ಆದ್ದರಿಂದ ಈ ಪ್ರಶ್ನೆಯನ್ನು ರಾಜಕೀಯ ದೃಷ್ಟಿಯಿಂದ ನೋಡದೇ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಬೇಕು. ಇಷ್ಟು ವಿಷಯಗಳನ್ನು ನಾನು ಈ ಮಾನ್ಯ ಸಭೆಯಲ್ಲಿ ಪ್ರಾರ್ಥನೆ ಮಾಡಿಕೊಂಡು, ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri H. R. KESHAVA MURTHY.—Point of order, Sir. ಸ್ವಾಮಿ, ಈ ವಿಷಯದಲ್ಲಿ ನಾನು ಕೇವಲ ಎರಡುಮೂರು ನಿಮಿಷಗಳಲ್ಲಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ.

Mr. SPEAKER.—A point of order has been raised. Rule 56 has been invoked by the Hon'ble Member. I do not think it applies here. The debate has to extend for atleast 2 hours and thereafter the closure should be applied. The Business Advisory Committee has allotted two hours. When the Committee has allotted that much of time, the closure at this stage is not proper. How the closure is to be applied is explained in the rule. Therefore the closure cannot be applied as raised by the Hon'ble Member in his point of order. I am unable to uphold this point of order nor can I apply the closure now.

ಶ್ರೀ ರಾಮಕೃಷ್ಣ ಹೆಗ್ಗಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ನಾನು ಈ ಸೂಚನೆಯನ್ನು ಮಾಡಬೇಕೆಂದಿದ್ದೇನೆ. ಇವೊತ್ತಿನ ದಿವಸದ ಅಜೆಂಡಾದಲ್ಲಿ ಎರಡು ಐಟಮ್‌ಗಳಿವೆ. ಮುಂದಿನ ಐಟಂ ಇರುವುದು ಸ್ವೀರ್‌ಪ್ಲಾಂಟ್ ವಿಚಾರವಾಗಿ. ಇದರ ಬಗ್ಗೆ ಮಾತನಾಡಲು ಮಾನ್ಯ ಸದಸ್ಯರಿಗೆ ಹೆಚ್ಚು ಸಮಯ ಬೇಕಾಗಬಹುದು. ಆದ್ದರಿಂದ ನಾವು ಈ ವಿಚಾರವನ್ನು, ಎಂದರೆ, ಈಗ ಚರ್ಚೆಯಾಗುತ್ತಿರುವ ನಿರ್ಣಯವನ್ನು ಮುಂದಕ್ಕೆ ಹಾಕಿ ಮುಂದಿನ ನಿರ್ಣಯವನ್ನು ತೆಗೆದು ಕೊಳ್ಳುವುದು ಒಳ್ಳೆಯದು.

Mr. SPEAKER.—I suppose that is allright. I suppose the House agrees for the postponement. I thought this may be discussed and that something has been arrived at. Any proposition before the House will have to be put to vote. He emphasises the adjustment of the matter. I put it to vote.

ಶ್ರೀ ಗಂಗಾಧರ ನಾವೋಷಿ.—ಸ್ವಾಮಿ, ಈ ನಿರ್ಣಯವನ್ನು ಓಟಿಗೆ ಹಾಕಬೇಕು.

11-00 A.M.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸೂಚನೆ ಏತಕ್ಕೆ ಮಾಡಿದೆ ಎಂದರೆ, ಈ ವಿಚಾರದ ಚರ್ಚೆಯಲ್ಲಿ ಭಾಗವಹಿಸಿರುವ ಜನರು ಬಹಳ ಇದ್ದಾರೆ. ಈ ಕಡೆಯೂ ಇರಬಹುದು; ಆ ಕಡೆಯೂ ಇರಬಹುದು. ಇದನ್ನು ಚರ್ಚೆ ಮಾಡುತ್ತಾ ಇದ್ದರೆ ಮುಂದಿನ ಎರಡು ಐಟಂಗಳನ್ನು ಈವೊತ್ತು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಮುಂದಕ್ಕೆ ಹಾಕಿ. ಸ್ವೀರ್‌ಪ್ಲಾಂಟ್ ಮತ್ತು ಬೇರೆ ಇನ್ನೊಂದು ಐಟಂ ತೆಗೆದುಕೊಳ್ಳಬಹುದು ಎಂದು ಹೇಳುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಈ ವಿಚಾರದಲ್ಲಿ ಒಬ್ಬರೇ ಮಾತನಾಡಿದ್ದಾರೆ. ಅದು ಔಚಿತ್ಯ ಆಗದೆ ಇರಬಹುದು, ಆದುದರಿಂದ ಇದರ ಮೇಲೆ ಮಾತನಾಡುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ತಾವು ಮಾತನಾಡಿ.

† ಶ್ರೀ ವಿ. ಎಂ. ದೇವ್.—ಸ್ವಾಮಿ, ಇದಕ್ಕೆ ಒಮ್ಮತ ಬರಬೇಕು; ಹೆಚ್ಚು ಬಹುಮತದ ಪ್ರಶ್ನೆಯಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಹೀಗೆ ಹೇಳುವುದರಲ್ಲಿ ಅರ್ಥವಿಲ್ಲ. ಈ ರೀತಿ ಮಾಡುವುದರಿಂದ ಜೀವನದ ಪ್ರವಾಹದ ರೀತಿನೀತಿಗಳನ್ನು ಕಡೆಗಣಿಸಿದಂತಾಗುತ್ತದೆ. ಈ ಸರ್ಕಾರದ ತಾರಾವಧಿಯಲ್ಲಿ ಒಂಬೇ ಒಂದು ಒಳ್ಳೆಯ ಕೆಲಸ ಆಗಲಿಲ್ಲ. ಕರ್ನಾಟಕ ಎಂದು ಈಗಲೇ ಹೆಸರಿಡದಿದ್ದರೆ ಹೇಗೆ? ಇದನ್ನು ಮುಂದೂಡುವುದು ಬೇಡ. ಇದರಿಂದ ದೇಶದ ಏಳಿಗೆಗೆ ಅಡ್ಡಿಯಾಗುತ್ತದೆ. ಆದ್ದರಿಂದ ಈಗಿನಿಂದಲೇ ಕರ್ನಾಟಕ ಎನ್ನುವ ಹೆಸರಿಡಿ ಎಂದು ಮನವಿ ಮಾಡಿ ಕೊಂಡು ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—The Hon'ble Minister for Finance has suggested postponement of the consideration of this resolution in view of the importance of the next item, though he has clubbed the next two Items, I emphasize the immediate next one; the Members may bear that in mind and allow me to assess the opinion of the House.

†ಶ್ರೀ ಗಂಗಾಧರ ನಾಮೋಶಿ.—On a point of order. ಇದು ಬಹಳ ಮಹತ್ವವಾದ ಪ್ರಶ್ನೆ. ಈ ಠರಾವು ಇದಕ್ಕೂ ಮೊದಲು ಬೇಕಾದಷ್ಟು ಸಲ ಚರ್ಚೆಯಾಗಿದೆ. ಈ ವಿಷಯ ನಿರ್ಣಯ ತೆಗೆದುಕೊಳ್ಳಬೇಕು. ಸರ್ಕಾರ ಯಾವುದೋ ನೆಪದಿಂದ ಹೋದಸಲ ಇದೇ ರೀತಿ ಕಡೇ ವೇಳೆಯಲ್ಲಿ ಮುಂದಕ್ಕೆ ಹಾಕಿತ್ತು. ಸ್ಟೀಲ್‌ಪ್ಲಾಂಟ್ ವಿಷಯ ಮಹತ್ವದ್ದು ಇದೆ. ಆದರೂ ಅದಕ್ಕೆ ಹೊಂದಾಣಿಕೆ ತಂದು ಮತ್ತೆ ಈ ನಿರ್ಣಯವನ್ನು ಮುಂದಕ್ಕೆ ಹಾಕಬಾರದು. ಇದರ ಮೇಲೆ ಓಟು ತೆಗೆದುಕೊಳ್ಳಬೇಕು.

Mr. SPEAKER.—There is no point of order in it.

†ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್‌ಪುರ).—ಇದು ಕಡೆಯ ದಿವಸ. ಶ್ರೀಮಾನ್ ದೊಡ್ಡ ಮೋಟಯವರ ರೆಸಲ್ಯೂಷನ್ ಮೇಲೆ ಎಷ್ಟೋ ಅಧಿವೇಶನಗಳಲ್ಲಿ ಚರ್ಚೆ ಆಗಿದೆ. ಸ್ಟೀಲ್‌ಪ್ಲಾಂಟ್ ವಿಷಯ ಚರ್ಚೆಯಾಗಬೇಕು ಎನ್ನುವುದು ಬರೀ ನೆಪ ಮಾತ್ರ ಆಗಿದೆ. ಈ ನಿರ್ಣಯವನ್ನು ಮುಂದಕ್ಕೆ ದೂಡಲಿಕ್ಕೆ ನೆಪವೇ ಏನಾ ಅದು ಬೋನಾಫೈಡ್ ಇದೆ ಎಂದು ನನಗೆ ಅನಿಸುವುದಿಲ್ಲ. ಇದನ್ನು ಮುಂದಕ್ಕೆ ಖಂಡಿತವಾಗಿಯೂ ಹಾಕಬಾರದು. ಮುಂದಿನ ಹೊಸ ಅಸೆಂಬ್ಲಿಗೆ ಶ್ರೀಮಾನ್ ಅನ್ನದಾನಪ್ಪನವರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಈಗ ಮಾತನಾಡತಕ್ಕವರು ಯಾರು ಯಾರು ಇದ್ದಾರೋ ಅವರು ಮುಂದೆ ಬರುತ್ತಾರೋ ಇಲ್ಲವೋ ಗೊತ್ತಿಲ್ಲ, ಮುಂದೆ ಬರುವ ಜನರು ಮಾತನಾಡಲಿದ್ದಾರೆ ಎಂದು ಹೇಳುವುದು ಸರಿಯಲ್ಲ; ಆದುದರಿಂದ ಈ ನಿರ್ಣಯವನ್ನು ಸಭೆಯು ಮುಂದೆ ಇಟ್ಟು ಅದರ ಅಭಿಪ್ರಾಯ ತೆಗೆದುಕೊಳ್ಳುವುದು ನೂಕ್ಕ ಎಂದು ಅನಿಸುತ್ತದೆ. ಒಂದೇ ನೆಪದಿಂದ ಇದನ್ನು ಮುಂದೂಡುವುದು ತಪ್ಪು. ಇದರ ಬಗ್ಗೆ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನನ್ನ ಸಲಹೆ.

Mr. SPEAKER.—Time and again I have said let us have peaceful transaction of business today. Let me ascertain the wishes of the House. Shall we adjourn the debate on this Resolution and take up the next item ?

Hon'ble MEMBERS.—Yes.

(*The discussion on the Resolution was adjourned* sine die).

Mr. SPEAKER.—Then we shall take up the Resolution of Sri A. P. Appanna.

RESOLUTION *Re*: LOCATION OF THE FIFTH STEEL PLANT AT HOSPET.

Sri A. P. APPANNA (Virajpet).—I beg to move :

"This Assembly strongly urges on the Government of India that the V Steel Plant be located at Hospet in Mysore State."

Mr. SPEAKER.—Resolution moved :

"This Assembly strongly urges on the Government of India that the V Steel Plant be located at Hospet in Mysore State."

†ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಅಧ್ಯಕ್ಷರೇ, ಈಗಾಗಲೇ 5ನೆಯ ಉಕ್ಕಿನ ಕಾರ್ಖಾನೆಯನ್ನು ಎಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ವಿಚಾರ ಕೇಂದ್ರ ಸರ್ಕಾರದ ಮನಸ್ಸನ್ನು ಕಳವಳಕ್ಕೆ ಈಡು ಮಾಡಿರುವುದರಲ್ಲಿ ಏನೂ ಸಂಶಯವಿಲ್ಲ. ಇಂತಹ ಒಂದು ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಳ್ಳುವಂತಹ ಸಂದರ್ಭದಲ್ಲಿ, ಅದರಲ್ಲೂ ಈ ಮೈಸೂರು ರಾಜ್ಯ ವಿಧಾನ ಸಭೆ ಕೊನೆಯ ದಿನವಾದ ಇಂದಿನ ದಿವಸ, ಈ ಒಂದು ನಿರ್ಧಾರವನ್ನು ಈ ಸಭೆಯು ಸರ್ವಾನುಮತದಿಂದ ಪಾಸು ಮಾಡುವುದು ಉಚಿತವಾಗಿ ಕಂಡುಬಂದುದರಿಂದ, ಈ ನಿರ್ಣಯವನ್ನು ಸಭೆಯ ಮುಂದೆ ಇಡಲಾಗಿದೆ.